ತರಬೇತಿ ಕೇಂದ್ರಗಳಲ್ಲಿನ ವಿದ್ಯಾರ್ಥಿಗಳಿಗೆ ತಿಂಗಳಿಗೆ ನೀಡುತ್ತಿರುವ ಸ್ಕಾಲರ್‌ಷಿಪ್ ವಿವರ :

ಪರಿಶಿಷ್ಟ ಜಾತಿ	*ಪರಿಶಿಷ್ಟ ವರ್ಗ*	*ಹಿಂದುಳಿದ ವರ್ಗ*
150 ರೂ.	150 ರೂ.	300 ರೂ.

ಇ) ಮತ್ತು ಈ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಭೋಜನಾ ವೆಚ್ಚದ ವಿವರ :

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರು
ಮೆಟ್ರಿಕ್ ಪೂರ್ವ	400	400	400
ಮೆಟ್ರಿಕ್ ನಂತರ	450	450	450

ಉ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಭೋಜನಾ ವೆಚ್ಚದಲ್ಲಿ ವ್ಯತ್ಯಾಸ ಇರುವುದಿಲ್ಲ. ಆದರೆ ಹೊಲಿಗೆ ತರಬೇತಿದಾರರಿಗೆ ನೀಡುವ ಸ್ಟೈಫೆಂಡಿನಲ್ಲಿ ವ್ಯತ್ಯಾಸವಿದ್ದು ಇದನ್ನು ಸರಿಪಡಿಸಬೇಕೆಂಬ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಕೈಗಾರಿಕಾ ಶೆಡ್ಡುಗಳ ವಿತರಣೆ

4757 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಡಾ: ಅಂಬೇಡ್ಕರ್ ರವರ 100 ವರ್ಷದ ಜನ್ಮ ದಿನಾಚರಣೆ ಅಂಗವಾಗಿ ಕೈಗಾರಿಕಾ ಶೆಡ್ಡುಗಳನ್ನು ಶೇಕಡ 40 ಸಬ್ಸಿಡಿ ಕೊಡುವ ನಿಯಮಾವಳಿ ಪ್ರಕಾರ ಹಂಚಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ಯೋಜನೆಯಂತೆ ಹಂಚಲಾದ ಶೆಡ್ಡುಗಳ ಸಂಖ್ಯೆ ಎಷ್ಟು? ಹಾಗೂ ಯಾವ ಯಾವ ಜಿಲ್ಲೆಗಳಲ್ಲಿ ಹಂಚಾಲಾಗಿದೆ?*

ಇ) *ಇವರಿಗೆ ಕೊಡುವ ಶೇಕಡ40 ಸಹಾಯದ ಹಣ ಸರ್ಕಾರದಿಂದ ವಿತರಣೆ ಆಗಿದೆಯೇ?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಹೌದು.

ಅ) ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ :

	ಜಿಲ್ಲಾ	ಹಂಚಿಕೆಯಾದ ಮಳಿಗೆಗಳು
1)	ಬೆಂಗಳೂರು-ಗ್ರಾಮಾಂತರ	96
2)	ಕೋಲಾರ	4
3)	ತುಮಕೂರು	1
4)	ಹಾವೇರಿ	4
5)	ಉತ್ತರ ಕನ್ನಡ	4
6)	ಗುಲ್ಬರ್ಗಾ	4
7)	ಬೀದರ್	3
8)	ಬಿಜಾಪುರ	4
9)	ಬಾಗಲಕೋಟೆ	2
10)	ಮೈಸೂರು	3
11)	ಮಂಡ್ಯ	2
12)	ಶಿವಮೊಗ್ಗ	2
13)	ದಕ್ಷಿಣ ಕನ್ನಡ	2
	ಒಟ್ಟು	**131**

ಆ) ಹೌದು.

ತುಂಗಾಭದ್ರಾ ನದಿಯಿಂದ ಕುಡಿಯುವ ನೀರು ತರುವ ಯೋಜನೆ

4759 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಹಾಗೂ ಬ್ಯಾಡಗಿ ನಗರ ಪ್ರದೇಶಗಳಿಗೆ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಮುದೆನೂರು ಗ್ರಾಮದಲ್ಲಿರುವ ತುಂಗಭದ್ರಾ ನದಿಯಿಂದ ಕುಡಿಯುವ ನೀರು ತರುವ ಯೋಜನೆಯು ಹಂತದಲ್ಲಿದೆ?

ಆ) ಈ ಯೋಜನೆ ಮಂಜೂರಾದಾಗ ತಗುಲಿದ ಯೋಜನೆಯ ವೆಚ್ಚ ಎಷ್ಟು?

ಇ) ಈಗ ತಗಲುವ ವೆಚ್ಚ ಎಷ್ಟು?